ಎಕರೆಗೆ "100" ಟನ್‌ಗಿಂತ ಅಧಿಕ ಕಬ್ಬು ಬೆಳೆಯಬೇಕೆ ?

ಕಬ್ಬು ನಮ್ಮ ರಾಜ್ಯದ ಪ್ರಮುಖ ವಾಣಿಜ್ಯ ಬೆಳೆ. ನೀರಾವರಿ ಸೌಲಭ್ಯವಿರುವ ಎಲ್ಲ ರೈತರು ಸಾಮಾನ್ಯವಾಗಿ ಕಬ್ಬಿನ ಬೇಸಾಯ ಮಾಡುತ್ತಾರೆ. ಕಬ್ಬು ದೀರ್ಘಾವಧಿ ಬೆಳೆಯಾಗಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಮತ್ತು ಪೋಷಕಾಂಶಗಳನ್ನು ಬಳಸಿಕೊಳ್ಳುತ್ತದೆ. ಈ ಎರಡು ಅಂಗಗಳ ನಿರ್ವಹಣೆಗೆ ಸೂಕ್ತ ರೀತಿಯಲ್ಲಿ ಭೂಮಿ ತಯಾರಿಕೆ ಅತಿ ಅವಶ್ಯ.

ನೆಲ ತಯಾರಿಸುವುದು: ಹದವರಿತು ಶೇ. 25 ರಷ್ಟು ಮಣ್ಣಿನ ತೇವಾಂಶವಿದ್ದಾಗ ಆಳವಾದ ಉಳುಮೆ ಮಾಡಿ, ಕುಂಟೆ ಮತ್ತು ರೆಂಟೆಗಳಿಂದ ಬಿತ್ತಲಿಕ್ಕೆ ಹದವಾದ ನೆಲವನ್ನು ತಯಾರಿಸಬೇಕು. ಜೂನ್ ಮೊದಲನೆ ವಾರದಲ್ಲಿ ಹಸಿರೆಲೆ ಗೊಬ್ಬರಗಳಾದ ಸೆಣಬು, ಡೈಯಾಂಚಾ ಅಥವಾ ದ್ವಿದಳ ದಾನ್ಯಗಳ ಮಿಶ್ರಣವನ್ನು ಪ್ರತಿ ಎಕರೆಗೆ 20–25 ಕಿಲೋ ಬೀಜವನ್ನು ಬಿತ್ತನೆ ಮಾಡಿ ಬೆಳೆಯು ಹುಲುಸಾಗಿ ಬೆಳೆದು ಶೇ. 50 ರಷ್ಟು ಹೂವಾಡುವ ಹಂತದಲ್ಲಿದ್ದಾಗ ಅದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೂಕ, ನೀರಿನ ಅಂಶ, ತಪ್ಪಲಿನ ಅಂಶದೊಂದಿಗೆ ಕಡಿಮೆ ಪ್ರವಾಣದಲ್ಲಿ ನಾರಿನ ಅಂಶ ಹೊಂದಿದಂತಹ ಹಸಿರೆಲೆ ಬೆಳೆಯನ್ನು ಸಂಪೂರ್ಣವಾಗಿ ಮಣ್ಣಿನಲ್ಲಿ ಮುಗ್ಗು ಹೊಡೆದು 15 ರಿಂದ 20 ದಿವಸದ ನಂತರ ಅಗಲವಾದ 5 ಅಥವಾ 6 ಅಡಿ ಅಂತರದ ಸಾಲುಗಳನ್ನು ಕೊರೆಯಬೇಕು.

ತಳಿಗಳ ಆಯ್ಕೆ: ಪ್ರಚಲಿತ ತಳಿಯಾದ ಸಿಓ 86032 ಮತ್ತು ಹೊಸದಾಗಿ ಶಿಫಾರಸ್ಸು ಮಾಡಿದ ತಳಿಗಳಾದ ಸಿ.ಓ.ಎಸ್.ಎನ್.ಕೆ. 15104 (ಹಿರಾ), ಸಿಓಎಸ್.ಎನ್.ಕೆ. 07680, ಸಿಓಎಸ್.ಎನ್.ಕೆ. 03632, ಸಿಓಎಸ್.ಎನ್.ಕೆ. 09293 (ಶರಧ) ಮತ್ತು ಸಿ.ಓ.ಎಂ. 0265 ಇವು ಹೆಚ್ಚು ಮರಿ ಹಾಕುವ ಸಾಮರ್ಥ್ಯ ಹೊಂದಿದ್ದು ಒಳ್ಳೆಯ ಕುಳೆ ಬೆಳೆ ಕೊಡುವುದರಿಂದ ಮೇಲೆ ಸೂಚಿಸಿದ ತಳಿಗಳನ್ನು ಹನಿ ನೀರಾವರಿಯಲ್ಲಿ ಬೆಳೆಯುವುದು ಸೂಕ್ತ.

ನಾಟಿ ಸಮಯ ಮತ್ತು ಪದ್ಧತಿ: ಕಬ್ಬಿನಲ್ಲಿ ಹೆಚ್ಚಿನ ಇಳುವರಿ ಪಡೆಯಲು ನಾಟಿ ಸಮಯ ಮತ್ತು ಪದ್ಧತಿ ಪ್ರಮುಖ ಪಾತ್ರ ವಹಿಸುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಬೆಳೆಯಲು ಹೆಚ್ಚಿನ ಕಾಲಾವಕಾಶ ಬೆಳವಣಿಗೆಗೆ ಬೇಕಾಗುತ್ತದೆ ಆದ್ದರಿಂದ ಅಡಸಾಲಿ ನಾಟಿ ಮಾಡುವುದು ಒಳ್ಳೆಯದು. ಕಬ್ಬನ್ನು ಜುಲೈ ತಿಂಗಳಿನಿಂದ ಅಗಷ್ಟ ತಿಂಗಳುಗಳಲ್ಲಿ ನಾಟಿ ಮಾಡುವುದು ಸೂಕ್ತ. 8 ರಿಂದ 10 ತಿಂಗಳ ಅವಧಿಯ ರೋಗ ರಹಿತ ಕಬ್ಬನ್ನು 2 ಕಣ್ಣುಗಳುಳ್ಳ ತುಂಡುಗಳನ್ನು ಮಾಡಿ ಬೀಜೋಪಚರಿಸಿ ಪ್ರತಿ ಎಕರೆಗೆ 1 ಟನ್ ನಷ್ಟು ಬೀಜವನ್ನು ಉಪಯೋಗಿಸಿದಲ್ಲಿ ಶೇ 80 ರಷ್ಟು ಮೊಳಕೆ ಪ್ರಮಾಣದೊಂದಿಗೆ ಸುಮಾರು 8000 ಸಸಿಗಳನ್ನು ಪ್ರತಿ ಎಕರೆಗೆ (1000 ಕೆಜಿ/ 1.5 ಕೆಜಿ = 666 ಕಬ್ಬು x 15 ಕಣ್ಣು = 9990 ಕಣ್ಣುಗಳು x 80% ಮೊಳಕೆ ಪ್ರಮಾಣ = 8000) ಕಾಪಾಡಿದಲ್ಲಿ 8000 ಗದ್ದೆಗಳಾಗಿ ಪರಿವರ್ತನೆಯಾಗಿ ಪ್ರತಿ ಗದ್ದೆಗೆ 8 ಮರಿಗಳು ಕಬ್ಬು ಬೆಳೆಯಾಗಿ ಪ್ರತಿ ಕಬ್ಬಿನ ತೂಕ ಸರಾಸರಿ 1.75 ರಿಂದ 2.0 ಕಿಲೋ ದಷ್ಟು ಬೆಳೆಯಲು ಸೂಕ್ತ ಪ್ರಮಾಣದಲ್ಲಿ ಮತ್ತು ಸೂಕ್ತ ಸಮಯಕ್ಕೆ ಪೋಷಕಾಂಶಗಳ ಮತ್ತು ನೀರಿನ ನಿರ್ವಹಣೆ ಪ್ರಮುಖ ಪಾತ್ರ ವಹಿಸುತ್ತದೆ ಅಥವಾ ನಾಟಿ ಮಾಡುವ ಸಮಯದಲ್ಲಿ ಕಬ್ಬಿನ ಬೀಜದ ಲಭ್ಯತೆವಿಲ್ಲದಿದ್ದಲ್ಲಿ ರೋಗ ರಹಿತ ಗುಣಮಟ್ಟದ 40 ರಿಂದ 50 ದಿವಸದ ಅವಧಿಯ ಕಬ್ಬಿನ ಸಸಿಗಳನ್ನು ಪ್ರತಿ ಎಕರೆಗೆ 4500 ದಿಂದ 5000 ಸಸಿಗಳನ್ನು 5 ರಿಂದ 6 ಅಡಿ ಅಂತರದ ಸಾಲುಗಳಲ್ಲಿ 2 ಅಡಿಗೊಂದರಂತೆ ನಾಟಿ ಮಾಡಬಹುದು.

ನೀರು ನಿರ್ವಹಣೆ: ಹೊಸದಾಗಿ ನೀರಾವರಿಗೆ ಒಳಪಟ್ಟ ಜಮೀನುಗಳಲ್ಲಿ ಪ್ರತಿ ಎಕರೆಗೆ 80 ಟನ್‌ನಷ್ಟು ಕಬ್ಬಿನ ಇಳುವರಿಯನ್ನು ಬೋದು ಸಾಲು ಹರಿ ನೀರಾವರಿಯಲ್ಲಿ ಪಡೆದ ಉದಾಹರಣೆಗಳು ಇವೆ. ಆದರೆ ಸತತವಾಗಿ ನಾಟಿ ಕಬ್ಬು ಮತ್ತು ಕುಳೆ ಕಬ್ಬಿನಲ್ಲಿ ಸ್ಥಿರವಾದ ಇಳುವರಿಯನ್ನು ಪಡೆಯಲಿಕ್ಕೆ ಮತ್ತು ಇಳುವರಿ ಮಟ್ಟವನ್ನು ಕಾಪಾಡಿಕೊಂಡು ಹೋಗಲಿಕ್ಕೆ ನೀರಾವರಿ ಪದ್ಧತಿ ಪ್ರಮುಖ ಪಾತ್ರ ಮಹಿಸುತ್ತದೆ. ಹನಿ ನೀರಾವರಿ ಪದ್ಧತಿ ಮೂಲಕ ಕಬ್ಬಿನ ಬೆಳೆಗೆ ಸಮರ್ಪಕವಾಗಿ ನೀರು ಪೋಲಾಗದಂತೆ ನೀರನ್ನು ಉಣಿಸಬಹುದು ಮತ್ತು ಒಳ್ಳೆಯ ಬೆಳವಣಿಗೆಯನ್ನು ಕಬ್ಬಿನಲ್ಲಿ ನಿರೀಕ್ಷಿಸಬಹುದು.

ಹನಿ ನೀರಾವರಿ ಪದ್ಧತಿಗಳು: ಮುಖ್ಯವಾಗಿ ಹನಿ ನೀರಾವರಿಯಲ್ಲಿ ಭೂಮಿಯ ಮೇಲೆ ಮತ್ತು ಭೂಮಿಯ ಒಳಗೆ ಹನಿ ನೀರಾವರಿಯ ಪೈಪುಗಳನ್ನು ಅಳವಡಿಸಿ ಕಬ್ಬಿಗೆ ನೀರನ್ನು ಹಾಯಿಸಬಹುದು. ಭೂಮಿಯ ಮೇಲೆ ಅಳವಡಿಸಿದ ಪದ್ಧತಿಯಲ್ಲಿ 5 ಅಡಿ ಅಂತರದ ಸಾಲುಗಳಲ್ಲಿ ಕಬ್ಬನ್ನು ನಾಟಿ ಮಾಡಿದಾಗ ಸಮರ್ಕವಾಗಿ ನೀರಿನ ನಿರ್ವಹಣೆ ಮಾಡಲು ಸೂಕ್ತ ಭೂಮಿಯ ಒಳಗೆ ಅಳವಡಿಸಿದ ಹನಿ ನೀರಾವರಿ ಪದ್ಧತಿಯಲ್ಲಿ 5, 6, 7 ರಿಂದ 8 ಅಡಿ ಅಂತರದ ಒಂದು ಸಾಲು ಅಥವಾ 1.5 ಅಡಿ ಅಂತರದ ಎರಡು ಸಾಲುಗಳ ನಾಟಿ ಮುಖಾಂತರ ಕಬ್ಬಿನ ಬೇಸಾಯ ಮಾಡಲಾಗುತ್ತಿದೆ. ಹನಿ ನೀರಾವರಿ ಘಟಕಗಳನ್ನು ಭೂಮಿಯ ಒಳಗೆ ಅಳವಡಿಸುವಾಗ ಪೈಪುಗಳನ್ನು ಕನಿಷ್ಠ 8 ರಿಂದ 10 ಇಂಚು ಭೂಮಿಯ ಒಳಗೆ ಹಾಕಬೇಕು ಮತ್ತು ಸಂಪೂರ್ಣವಾಗಿ ಕಬ್ಬಿಗೆ ಬೋದು ಏರಿಸಿದಾಗ ಮಾತ್ರ ಕಬ್ಬು ಸಾಕಷ್ಟು ಮರಿಗಳನ್ನು ಹಾಕಿ ಕಬ್ಬಿನ ಸಂಖ್ಯೆ ಹೆಚ್ಚಿಸಲು ಪ್ರಯೋಜನಕಾರಿಯಾಗುವುದಲ್ಲದೇ ಕಬ್ಬು ನೆಲಕ್ಕೆ ಬೀಳದ ಹಾಗೇ ಆಶ್ರಯ ಕೊಡುತ್ತದೆ. ಹನಿ ನೀರಾವರಿಯಲ್ಲಿ ಪ್ರತಿ ಘಂಟೆಗೆ 2 ಲೀಟರ್ ಪ್ರತಿ ಗುಂಡಿಗೆ 40 ಅಥವಾ 50 ಸೆಂ. ಮಿ ಅಂತರದಲ್ಲಿ ನೀರನ್ನು ಕೊಡುವುದರಿಂದ ಸಮರ್ಪಕವಾಗಿ ನೀರಿನ ನಿರ್ವಹಣೆ ಮಾಡಲು ಸಾಧ್ಯ. ಕಬ್ಬಿನ ಬೆಳೆಗೆ ಮೊದಲ 3 ತಿಂಗಳು ಪ್ರತಿದಿನ 2 ಘಂಟೆ, 3–10 ತಿಂಗಳವರೆಗೆ –3 ಘಂಟೆ, ನಂತರ 2½ ಘಂಟೆ ನೀರು ಕೊಡುವುದು ಸೂಕ್ತ.

ಪೋಷಕಾಂಶಗಳ ನಿರ್ವಹಣೆ: ಕಬ್ಬಿನ ಬೇಸಾಯಕ್ಕೆ ಒಳಪಟ್ಟ ಬಹುತೇಕ ಮಣ್ಣಿನಲ್ಲಿ ಕಡಿಮೆ ಪ್ರಮಾಣದಲ್ಲಿ ಸಾರಜನಕ, ಕಡಿಮೆಯಿಂದ ಮಧ್ಯಮ ಪ್ರಮಾಣದಲ್ಲಿ ರಂಜಕ ಹಾಗೂ ಮಧ್ಯಮದಿಂದ ಹೆಚ್ಚಿನ ಪ್ರಮಾಣದಲ್ಲಿ ಪೋಟ್ಯಾಷ್ ಪೋಷಕಾಂಶಗಳನ್ನು ಹೊಂದಿರುವುದರಿಂದ ಪ್ರತಿ ಟನ್ ಕಬ್ಬು ಸರಾಸರಿಯಾಗಿ 1.5 ರಿಂದ 1.8 ಕಿಲೋ ಸಾರಜನಕ, 0.3 ರಿಂದ 0.5 ಕಿಲೋ ರಂಜಕ ಹಾಗೂ 2.0 ರಿಂದ 2.5 ಕಿಲೋ ಪೋಟ್ಯಾಷನ್ನು ತೆಗೆದುಕೊಳ್ಳುತ್ತದೆ. 100 ಟನ್ ಕಬ್ಬು ಬೆಳೆಯಲು ಪ್ರತಿ ಎಕರೆಗೆ ಹನಿ ನೀರಾವರಿಯಲ್ಲಿ ಗೊಬ್ಬರದ ಅವಶ್ಯಕತೆ ಸಮರ್ಪಕವಾಗಿ ಲಘುಪೋಷಕಾಂಶಗಳ ಉಪಯೋಗದೊಂದಿಗೆ ಸಂಪದ್ಭರಿತ ಸಾವಯವಗೊಬ್ಬರಗಳಾದ ಎರೆಹುಳು ಗೊಬ್ಬರ (2 ಟನ್), ಸೋಸಿದ ತಿಪ್ಪೆ ಗೊಬ್ಬರ, ಕಾಂಪೋಷ್ಟ ಗೊಬ್ಬರಗಳನ್ನು (10 ಟನ್) ಕಬ್ಬಿನ ಸಾಲುಗಳಲ್ಲಿ ಹಾಕಿ ಕಬ್ಬು ನಾಟಿ ಮಾಡಿದ ನಂತರ 150:40:75 ಕಿಲೋ ಸಾರಜನಕ, ರಂಜಕ ಮತ್ತು ಪೋಟ್ಯಾಷ್ ಗೊಬ್ಬರಗಳನ್ನು ಕೊಡಬೇಕು. ಹನಿ ನೀರಾವರಿಯಲ್ಲಿ ರಸಾವರಿ ಪದ್ಧತಿ ಅಳವಡಿಸುವುದರಿಂದ ಗೊಬ್ಬರದ ಬಳಕೆ ಸಾಮರ್ಥ್ಯವನ್ನು ಹೆಚ್ಚಿಸಬಹುದು. ಕಬ್ಬಿನ ಬೆಳೆಗೆ 10 ರಿಂದ 12 ತಿಂಗಳ ಅವಧಿಯವರೆಗೆ ರಸಾವರಿ ಪದ್ಧತಿಯನ್ನು ಅಳವಡಿಸಲು ಮತ್ತು ಇಳುವರಿ ಮಟ್ಟವನ್ನು ಕಾಪಾಡಲು ಅನುಕೂಲವಾಗುತ್ತದೆ. ಲಘುಪೋಷಕಾಂಶಗಳಾದ ಕಬ್ಬಿಣ ಮತ್ತು ಸತುವನ್ನು ಪ್ರತಿ ಎಕರೆಗೆ 10 ಕಿಲೋದಷ್ಟು ರಸಾವರಿ ಪದ್ಧತಿಯಲ್ಲಿ ಮೊದಲ ಎರಡು ತಿಂಗಳಲ್ಲಿ ಕೊಡುವುದು ಮತ್ತು ಸುಣ್ಣ, ಮ್ಯಾಗ್ನೆಸಿಯಂ, ಗಂಧಕ (ಪ್ರತಿಯೊಂದು 10 ಕಿಲೋ) ಹಾಗೂ ಬೋರಾನ್‌ನನ್ನು (1 ಕಿಲೋ) ಮೂರು ಮತ್ತು ನಾಲ್ಕನೆ ತಿಂಗಳಲ್ಲಿ ಕ್ರಮವಾಗಿ ಕೊಡುವುದು ಸೂಕ್ತ. ರಂಜಕದ ಗೊಬ್ಬರವನ್ನು ಪ್ರತಿ ವಾರ 10 ಕಿಲೋ ಪ್ರತಿ ಎಕರೆಗೆ ಮೂರು ವಾರದವರೆಗೆ ಕೊಡಬೇಕು. ಉಳಿದ 10 ಕಿಲೋ ರಂಜಕವನ್ನು 4 ರಿಂದ 5 ತಿಂಗಳಿಗೆ ಕೊಡುವುದರಿಂದ ತಡವಾಗಿ ಹುಟ್ಟಿದ ಕಬ್ಬಿನ ಮರಿಗಳಿಗೆ ರಂಜಕ ಪೂರೈಸುವುದಲ್ಲದೇ ಹನಿ ನಿರಾವರಿ ಪೈಪುಗಳ ಸ್ವಚ್ಛತೆಯನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ. ರಂಜಕದ ಪೋಷಕಾಂಶವನ್ನು ಪಾಸ್ಪರಿಕ್ ಅಸಿಡ್ ಮುಖಾಂತರ ಕೊಡುವುದು ಸೂಕ್ತ. ಸಾರಜನಕ ಮತ್ತು ಪೊಟ್ಯಾಷ್ ಪೋಷಕಾಂಶಗಳನ್ನು ಕ್ರಮವಾಗಿ ಯೂರಿಯಾ ಹಾಗೂ ಮ್ಯೂರಿಯೇಟ್ ಆಪ್ ಪೋಟ್ಯಾಷ್ (ಬಿಳಿ ಬಣ್ಣದ್ದು) ಮೂಲಕ ಕೊಡುವುದರಿಂದ ಗೊಬ್ಬರದ ನಿರ್ವಹಣೆಯನ್ನು ಕಡಿಮೆ ಖರ್ಚಿನಲ್ಲಿ ಮಾಡಬಹುದು. ಯೂರಿಯಾ ಮತ್ತು ಎಮ್.ಓ.ಪಿ. ಗೊಬ್ಬರಗಳನ್ನು ಪ್ರತಿ 20 ರಿಂದ 25 ದಿನಗಳ ಅಂತರದಲ್ಲಿ ಪ್ರತಿ ಎಕರೆಗೆ ಮೊದಲ 100 ದಿನಗಳವರೆಗೆ 25 ಕಿಲೋ ಕೊಡುವುದು ಸೂಕ್ತ. 100 ರಿಂದ 240 ದಿವಸದ ವರೆಗೆ 50 ಕಿಲೋ ಗೊಬ್ಬರ ನಂತರ 240 ರಿಂದ 300 ದಿವಸದವರೆಗೆ 25 ಕಿಲೋ ಯೂರಿಯಾ ಮತ್ತು ಪೋಟ್ಯಾಷ್‌ನ್ನು ಕೊಡಬೇಕು. ಕಬ್ಬಿನ ಬೆಳೆಯ ಬೇಡಿಕೆ ಪ್ರಮಾಣದ ಆಧಾರದ ಮೇಲೆ ಬಹಳ ದಿನದವರೆಗೆ ಗೊಬ್ಬರ ಕೊಡುವುದರಿಂದ ಪೋಷಕಾಂಶಗಳ ಸಮರ್ಪಕ ಬಳಕೆಯೊಂದಿಗೆ ಹೆಚ್ಚಿನ ಇಳುವರಿಯನ್ನು ಪಡೆಯಲು ಸಾಧ್ಯವಾಗುತ್ತದೆ. ದೀರ್ಘಾವಧಿವರೆಗೆ ಸಾರಜನಕ ಮತ್ತು ಪೋಟ್ಯಾಷ್ ಗೊಬ್ಬರವನ್ನು ಪೂರೈಸುವುದರಿಂದ ಕಬ್ಬಿನಲ್ಲಿ (Inversion) ಬೆಂಡವಾಗುವುದು, ಸುಲಂಗಿ ಒಡೆಯುವುದು, ರೋಗ ಮತ್ತು ಕೀಟಗಳಿಗೆ ತುತ್ತಾಗುವುದನ್ನು ತಪ್ಪಿಸಬಹುದು. ಅಲ್ಲದೇ ಒಳ್ಳೆಯ ಸಕ್ಕರೆ ಅಂಶವನ್ನು ಕಬ್ಬಿನಲ್ಲಿ ಕಾಪಾಡಿಕೊಳ್ಳಲಿಕ್ಕೆ ಸಹಕಾರಿಯಾಗುತ್ತದೆ. ಪೋಷಕಾಂಶಗಳ ನಿರ್ವಹಣೆಯಲ್ಲಿ ಅದರಲ್ಲೂ ಹನಿ ನೀರಾವರಿ ಅಳವಡಿಸಿದ ಕ್ಷೇತ್ರಗಳಲ್ಲಿ ಖಾಸಗಿ ಕಂಪನಿಗಳು ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಪರಿಚಯಿಸಿ ಬೇಸಾಯದ ಖರ್ಚನ್ನು ದ್ವಿಗುಣಗೊಳಿಸಿ ರೈತರಿಗೆ ಬೇರೆಯದೇ ರೀತಿಯಲ್ಲಿ ತಿಳಿ ಹೇಳಿ ನೀರಿನಲ್ಲಿ ಕರಗುವ ಗೊಬ್ಬರದ ಉಪಯೋಗದಿಂದ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಾಯಿತು ಎಂದು ಬಿಂಬಿಸುತ್ತಿವೆ. ಆದ್ದರಿಂದ ಹನಿ ನೀರಾವರಿಯಲ್ಲಿ ಕಬ್ಬು ಬೆಳೆಯುವ ರೈತರು ಪೋಷಕಾಂಶವೆಂದರೇನು, ಅದು ಯಾವ ರೂಪದಲ್ಲಿ ಬೆಳೆಗೆ ಸಿಗುತ್ತದೆ ಮತ್ತು ಅದಕ್ಕೆ ತಗಲುವ ಖರ್ಚು ಹಾಗೂ ಅವುಗಳ ಉಪಯೋಗದಿಂದ ಮಣ್ಣಿನ ಮೇಲೆ ಆಗುವ ಪರಿಣಾಮ ಇವೆಲ್ಲವನ್ನು ಗಮನಿಸುವುದು ಸೂಕ್ತ. ಉದಾಹರಣೆಗೆ ಪ್ರತಿ ಎಕರೆಗೆ 40 ಕಿಲೋ ಪಾಸ್ಪರಿಕ್ ಅಸಿಡ್, 325 ಕಿಲೋ ಯೂರಿಯಾ ಮತ್ತು 330 ಕಿಲೋ ಪೊಟ್ಯಾಷ ಗೊಬ್ಬರಗಳನ್ನು ಲಘುಪೋಷಕಾಂಶಗಳ ಸಹಯೋಗದೊಂದಿಗೆ ಉಪಯೋಗಿಸಿದಲ್ಲಿ ರೂ. 12000 ಖರ್ಚು ಬರುತ್ತದೆ. ಇದೇ ಪ್ರಮಾಣದಲ್ಲಿ ಪೋಷಕಾಂಶಗಳನ್ನು ನೀರಿನಲ್ಲಿ ಕರಗುವ ಗೊಬ್ಬರಗಳ ಮುಖಾಂತರ ಪೂರೈಸಿದಲ್ಲಿ ಎಕರೆಗೆ ರೂ. 35000 ರಿಂದ 38000 ಖರ್ಚು ತಗಲುವುದಲ್ಲದೇ ಕುಳೆ ಬೆಳೆ ಹಾಗೂ ಮಣ್ಣಿನ ಮೇಲೆ ದುಷ್ಪರಿಣಾಮ ಬೀರಿದ ಉದಾಹರಣೆಗಳನ್ನು ರೈತರು ಸಾಕಷ್ಟು ಮನಗಂಡಿದ್ದಾರೆ ಆದ್ದರಿಂದ ಶಿಫಾರಸ್ಸು ಮಾಡಿದ ಗೊಬ್ಬರಗಳ ಉಪಯೋಗದಿಂದ ಕಡಿಮೆ ಖರ್ಚಿನಲ್ಲಿ ಯಾವ ತೊಂದರೆಯಿಲ್ಲದೇ ಕಬ್ಬಿನ ಇಳುವರಿಯನ್ನು ಕಾಪಾಡಲು ಸಾಧ್ಯ.

ಕಳೆ ನಿರ್ವಹಣೆ: ಆಳವಾದ ಉಳುಮೆ ಮಾಡಿ ಹದವರಿತು ನೆಲ ತಯಾರಿಸಿ ಹನಿ ನೀರಾವರಿಯಲ್ಲಿ ಕಬ್ಬಿನ ಬೇಸಾಯ ಮಾಡಿದ ರೈತರಲ್ಲಿ ಕಳೆ ಸಮಸ್ಯೆ ಕಡಿಮೆ ಎಂತಲೂ ಹೇಳಬಹುದು. ಸಹಜವಾಗಿ ಸಣ್ಣ ಟ್ರ್ಯಾಕ್ಟರ್‌ನಿಂದ ಅಥವಾ ಎತ್ತಿನ ಕುಂಟೆಯಿಂದ ಸಾಲುಗಳ ಮಧ್ಯ ತೆಳುವಾಗಿ ಹರಗಿ ನಂತರ ಕೈಕಳೆ ತೆಗೆಯುವುದು ಸಾಮಾನ್ಯ. ಕಬ್ಬು ನಾಟಿ ಮಾಡಿದ ಮೂರು ದಿನದೊಳಗೆ ಪ್ರತಿ ಲೀಟರ ನೀರಿಗೆ ಕಳೆನಾಶಕಗಳಾದ ಅಟ್ರಾಜಿನ್ (3.3 ಗ್ರಾಂ) ಅಥವಾ ಮೆಟ್ರಿಬುಜಿನ್ (1.5 ಗ್ರಾಂ) ಔಷಧಿಗಳನ್ನು ಬೆಳೆ ಹುಟ್ಟುವ ಪೂರ್ವದಲ್ಲಿ ಸಿಂಪರಿಸಬಹುದು ಅಥವಾ ಕಬ್ಬು ನಾಟಿ ಮಾಡಿದ 30 ದಿನದ ನಂತರ ಪ್ರತಿ ಲೀಟರ್ ನೀರಿಗೆ 2–4 ಡಿ – ಸೋಡಿಯಂ ಸಾಲ್ಟ್ (2 ಗ್ರಾಂ) + ಮೆಟ್ರಿಬುಜಿನ್ (1 ಗ್ರಾಂ) ಔಷಧಿಗಳನ್ನು ಟ್ಯಾಂಕಿನಲ್ಲಿ ಮಿಶ್ರಣ ಮಾಡಿ ಸಿಂಪರಿಸಿ ಕಳೆಗಳನ್ನು ಹತೋಟಿ ಮಾಡಬಹುದು.

ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ

ಸಾಗುವಳಿ ಕ್ರಮಗಳು: ಮಾಗಿ ಉಳುಮೆ ಮಾಡುವುದು. ಕೀಟರಹಿತ ಮತ್ತು ರೋಗರಹಿತ ಕಬ್ಬಿನ ತುಂಡುಗಳನ್ನು ನಾಟಿಗಾಗಿ ಬಳಕೆ

ವಾಡುವುದು ಮತ್ತು ಉಗಿಯಿಂದ ಉಷ್ಣೋಪಚಾರ ಮಾಡುವುದು. ಸೂಕ್ತ ಸಮಯದಲ್ಲಿ ನಾಟಿ ಮಾಡುವುದು. 45 ದಿನದ ಪೈರಿಗೆ ಬುಡದ ಗರಿ ಸೋಗೆ ಮುಚ್ಚುವಂತೆ ಮಣ್ಣು ಏರಿಸುವುದು. ಬೆಳೆ ಪರಿವರ್ತನೆ ಮಾಡುವುದು. ಅಂತರ ಬೆಳೆಯಾಗಿ ಈರುಳ್ಳಿ, ಬೆಳ್ಳುಳ್ಳಿ, ಕೊತಂಬರಿ ಬೆಳೆಗಳನ್ನು ಬೆಳೆಯುವುದು. ಸಮರ್ಪಕ ಗೊಬ್ಬರ ಮತ್ತು ನೀರಿನ ನಿರ್ವಹಣೆ. ಅಗಲದ ಸಾಲಿನಲ್ಲಿ ನಾಟಿ ಮಾಡುವುದು.

ಯಾಂತ್ರಿಕ ಕ್ರಮಗಳು: ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಗೊಣ್ಣೆ ಹುಳುಗಳನ್ನು ಆರಿಸಿ ನಾಶಪಡಿಸುವುದು. ಗೆದ್ದಲು ಹುಳುವಿನ ಹುತ್ತವನ್ನು ಪತ್ತೆ ಹಚ್ಚಿ ರಾಣಿ ಹುಳುವನ್ನು ಸಾಯಿಸುವುದು. ರೋಗ ಪೀಡಿತ ಪೊದೆಗಳನ್ನು ನಾಶಪಡಿಸಬೇಕು. 5 ತಿಂಗಳ ಮೇಲ್ಪಟ್ಟ ಬೆಳೆಯಲ್ಲಿ ಕಾಲಕಾಲಕ್ಕೆ ಒಣಗಿದ ಗರಿಗಳನ್ನು ತೆಗೆಯುವುದು.

ಜೈವಿಕ ಕ್ರಮಗಳು: ಟ್ರೈಕೋಗ್ರಾಮಾ ತತ್ತಿ ಪರತಂತ್ರ ಜೀವಿಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಬಿಡಗಡೆ ಮಾಡುವುದು (ಸಸಿ ಸುಳಿ ಕೊರಕ, ಗಣಿಕೆ ಕೊರಕ ಮತ್ತು ತುದಿ ಸುಳಿ ಕೊರಕಗಳ ನಿರ್ವಹಣೆಗಾಗಿ). ಏಪಿರಕೇನಿಯಾ ಬಾಹ್ಯ ಪರತಂತ್ರ ಜೀವಿಯ ಕೋಶಗಳನ್ನು ಹೆಕ್ಟೇರಿಗೆ 8 ರಿಂದ 10 ಸಾವಿರ ಅಥವಾ 8 ರಿಂದ 10 ಲಕ್ಷ ತತ್ತಿಗಳನ್ನು ಪ್ರತಿ ಹೆಕ್ಟೇರಿಗೆ ಬಿಡುಗಡೆ ಮಾಡುವುದು. ಗೊಣ್ಣೆ ಹುಳದ ನಿಯಂತ್ರಣಕ್ಕಾಗಿ ಮೆಟಾರೈಝಿಯಮ್ ಶಿಲೀಂಧ್ರವನ್ನು 8–10 ಕಿ.ಗ್ರಾಂ ಪ್ರತಿ ಎಕರೆಗೆ ಕೊಟ್ಟಿಗೆ ಗೊಬ್ಬರದೊಂದಿಗೆ ಬೆರೆಸಿ ಮಣ್ಣಿನಲ್ಲಿ ಸೇರಿಸಬೇಕು. ಬಿಳಿ ಉಣ್ಣೆ ಹೇನಿನ ಬಾಧಿತ ಕ್ಷೇತ್ರದಲ್ಲಿ ಬಾಧೆಗೆ ಅನುಸಾರವಾಗಿ ಪರಭಕ್ಷಕ ಕೀಟಗಳಾದ ಡೈಫಾ ಮತ್ತು ಮೈಕ್ರೋಮಸ್‌ಗಳನ್ನು ಪ್ರತಿ ಹೆಕ್ಟೇರಿಗೆ 2000 ದಂತೆ ಬಿಡುಗಡೆ ಮಾಡುವುದು. ಕಬ್ಬಿನ ಪರಿಸರದಲ್ಲಿ ಪರತಂತ್ರ, ಪರಭಕ್ಷಕ ಮತ್ತು ಶಿಲೀಂಧ್ರಗಳನ್ನು ಸಂರಕ್ಷಿಸಿ ಉತ್ತೇಜಿಸುವುದು. ಕೀಟ ಮತ್ತು ರೋಗ ನಿರೋಧಕ / ಬಾಧೆ ತಡೆದುಕೊಳ್ಳುವ ತಳಿಗಳ ಬಳಕೆ ಸೂಕ್ತ.

ರಾಸಾಯನಿಕ ಕ್ರಮಗಳು: ಫೆಬ್ರುವರಿ ತಿಂಗಳಲ್ಲಿ ಪ್ರತಿ ಎಕರೆಗೆ 100 ಗ್ರಾಂ ಲೆಸೆಂಟಾ 80 ಡ್ಲ್ಯೂ.ಜಿ. ಯನ್ನು ನೀರಿನಲ್ಲಿ ಮಿಶ್ರಣ (5 ಗ್ರಾಂ/ಪ್ರತಿ 15 ಲೀ. ನೀರಿಗೆ) ಮಾಡಿ, ನಾಟಿ ಮಾಡಿದ ಸಾಲುಗಳ ಮೇಲೆ ಉಣಿಸುವುದು. ನಾಟಿ ಮಾಡುವಾಗ ಕಬ್ಬಿನ ತುಂಡುಗಳನ್ನು ಕಾರ್ಬನ್‌ಡೈಜಿಮ್ 50 ಡಬ್ಲೂ.ಪಿ. 100 ಗ್ರಾಂ + ಕ್ಲೋರ್‌ಪೈರಿಪಾಸ್ 20 ಇ. ಸಿ. 100 ಮಿ.ಲೀ. + ಯೂರಿಯಾ 100 ಗ್ರಾಂ ಇವುಗಳನ್ನು 100 ಲೀಟರ್ ನೀರಿನಲ್ಲಿ ಹಾಕಿ 10 ನಿಮಿಷ ಬೀಜೋಪಚಾರ ವಾಡಬೇಕು. ನಾಟಿ ವಾಡಿದ 45 ದಿನಗಳ ನಂತರ ಕ್ಲೋರ್‌ಪೈರಿಫಾಸ್ (2 ಮಿ.ಲೀ. ಪ್ರತಿ ಲೀಟರ ನೀರಿಗೆ) ಸಿಂಪಡಿಸುವುದು. ತುಕ್ಕು ರೋಗದ ಹತೋಟಿಗಾಗಿ ಮ್ಯಾಕೋಜೆಬ್ 2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದು. ಅಗತ್ಯ ಬಿದ್ದರೆ ಫೋರೆಟ್ ಹರಳನ್ನು (25 ಕಿ.ಗ್ರಾಂ/ಹೆಕ್ಟೇರಿಗೆ) ಮಾರ್ಚ ತಿಂಗಳಲ್ಲಿ ಮಣ್ಣಿನಲ್ಲಿ ಬೆರೆಸುವುದು. ಮಳೆಗಾಲದಲ್ಲಿ ಹೆಚ್ಚು ನೀರಿನ ಪ್ರಮಾಣ ಇರುವುದರಿಂದ ಮತ್ತು ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಿ ಸಾರಜನಕದ ಲಭ್ಯತೆ ಕಡಿಮೆಯಾಗುವುದರಿಂದ ಬಿಳಿ ನೊಣದ ಬಾಧೆಯು ಕಾಣಿಸುತ್ತದೆ. ಈ ಕೀಟದ ಬಾಧೆ ಕಂಡ ತಕ್ಷಣ 0.5 ಗ್ರಾಂ ಥಯೋಮಿಥಾಕ್ಸಾಮ್ 25 ಡಬ್ಲ್ಯೂಜಿ ಅಥವಾ 2 ಮಿ.ಲೀ. ಡೈಮಿಥೋಯೆಟ್ 30 ಇ.ಸಿ. ಜೊತೆಗೆ 20 ಗ್ರಾಂ ಯೂರಿಯಾ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಕೀಟದ ತೀವ್ರತೆಗನುಗುಣವಾಗಿ ನೀರು ಕೊಟ್ಟ ನಂತರ ಮೇಲ್ಗೊಬ್ಬರವಾಗಿ ಪ್ರತಿ ಎಕರೆಗೆ 20–25 ಕಿ.ಗ್ರಾಂ ಯೂರಿಯಾ ಜೊತೆಗೆ ಹರಳು ರೂಪದ ಕೀಟನಾಶಕವಾದ ಕ್ಲೋರ್ಯಾಂಟ್ರನಿಲಿಪ್ರೋಲ್ 0.4 ಜಿ.ಆರ್. ನ್ನು ಪ್ರತಿ ಎಕರೆಗೆ 5 ಕಿ.ಗ್ರಾಂ ಕೊಡುವುದು ಸೂಕ್ತ.

ಇಳುವರಿ: ಪ್ರತಿ ಎಕರೆಗೆ 6000 ರಿಂದ 7000 ಕಬ್ಬಿನ ಮೂಲ ಸಸಿ ಅಥವಾ ಗದ್ದೆಗಳನ್ನು ಬೆಳೆಸಿದಲ್ಲಿ ಪ್ರತಿ ಗದ್ದೆಯಿಂದ 8 ಕಬ್ಬುಗಳನ್ನು ಬೆಳೆದು ಪ್ರತಿ ಕಬ್ಬಿನ ಸರಾಸರಿ ತೂಕ 2 ಕಿಲೋ ಕಾಪಾಡಿದಲ್ಲಿ ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯಲು ಸಾದ್ಯ. ಹನಿ ನೀರಾವರಿಯಲ್ಲಿ 6 ರಿಂದ 7 ಅಡಿ ಅಂತರದ ಸಾಲುಗಳಲ್ಲಿ ಕಬ್ಬಿನ ನಾಟಿ ಮತ್ತು ಬೋದು ಸಾಲುಗಳಲ್ಲಿ ಹರಿ ನೀರಾವರಿ ಪದ್ಧತಿಯಲ್ಲಿ 5 ಅಡಿ ಅಂತರದ ಸಾಲುಗಳು ಬೇಸಾಯಕ್ಕೆ ಸೂಕ್ತವೆಂದು ತಿಳಿದು ಬಂದಿದೆ. ಈ ಮೇಲೆ ತಿಳಿಸಿದ ಬೇಸಾಯ ಕ್ರಮಗಳನ್ನು ಆಧರಿಸಿ 95 ಟನ್ನಿನಿಂದ 115 ಟನ್ ನಾಟಿಕಬ್ಬು ಹಾಗೂ 80–85 ಟನ್‌ನಷ್ಟು ಕುಳೆ ಕಬ್ಬಿನ ಇಳುವರಿ ಪಡೆದ ರೈತರ ಅನುಭವದ ಮೇಲೆ ಈ ಟಿಪ್ಪಣಿಯನ್ನು ಸಿದ್ಧಪಡಿಸಲಾಗಿದೆ.

ಹೆಚ್ಚಿನ ಇಳುವರಿ ಕಾಪಾಡಿಕೊಳ್ಳುವುದು ಹೇಗೆ

ರೋಗರಹಿತ ಹೆಚ್ಚಿನ ಪ್ರಮಾಣದಲ್ಲಿ ಮರಿ ಹಾಕುವ ಮತ್ತು ಕುಳೆ ಬೆಳೆ ಕೊಡುವ ತಳಿಗಳ ಆಯ್ಕೆ. ಹನಿ ನೀರಾವರಿ ಪದ್ಧತಿ ಅಳವಡಿಕೆ ಜೊತೆಗೆ ರಸಾವರಿ ಪದ್ಧತಿಯನ್ನು ಪಾಲಿಸುವುದು. ಕಬ್ಬಿನ ಬೆಳೆಗೆ ಸದಾ ಕಾಲ ನೀರಿನ ತುಟಾಗ್ರತೆ ಉಂಟಾಗದಂತೆ ನೋಡಿಕೊಳ್ಳುವುದು. (ಬೇಸಿಗೆಯಲ್ಲಿ ನೀರಿನ ಕೊರತೆಯಾಗದಂತೆ ನೋಡಿಕೊಳ್ಳುವುದು). ಅತಿ ಹೆಚ್ಚಿನ ಪ್ರಮಾಣದಲ್ಲಿ ಮರಿಗಳ ಸಂಖ್ಯೆ ಕಾಪಾಡುವುದರಿಂದ ಕಬ್ಬಿನ ತೂಕ ಕಡಿಮೆಯಾಗುತ್ತದೆ ಮತ್ತು ಪೂರ್ಣ ಪ್ರವಾಣದಲ್ಲಿ ಕಬ್ಬಿನ ಬೆಳವಣಿಗೆಯಾಗದೇ ಕುಂಠಿತವಾಗುತ್ತದೆ. Co-86032, ಮತ್ತು CoM–265 ತಳಿಗಳಿಗೆ ನೀರಿನ ಕೊರತೆ ನಿಭಾಯಿಸಿಕೊಳ್ಳುವ ಶಕ್ತಿ ಇಲ್ಲ. ಹಸಿರೆಲೆ ಗೊಬ್ಬರ ಮತ್ತು ಇತರೆ ಸಾವಯವ ಗೊಬ್ಬರಗಳ ಬಳಕೆಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು, ಗಾಳಿ ಮತ್ತು ಪೋಷಕಾಂಶಗಳ ಉಪಯೋಗ.

ಪ್ರತಿ ಎಕರೆಗೆ 100 ಟನ್ ಕಬ್ಬು ಬೆಳೆಯಲಿಕ್ಕೆ ತಗಲುವ ಖರ್ಚು (ರೂ.)

1. ನೆಲ ತಯಾರಿಸಲಿಕ್ಕೆ	4500
2. ಬೀಜದ ಖರ್ಚು (1 ಟನ್) ಸಾಗಣೆ	4000
3. ಕಬ್ಬು ಹಚ್ಚುವುದು ಮತ್ತು ಬೀಜೋಪಚಾರ	3000
4. ಸಾವಯವ ಗೊಬ್ಬರ + ಹಸಿರೆಲೆ ಗೊಬ್ಬರ	15000
5. ರಸಾಯನಿಕ ಗೊಬ್ಬರಗಳು	14000
6. ಹನಿ ನೀರಾವರಿ ಘಟಕ	12000

7. ಕಳೆ ನಿರ್ವಹಣೆ	10000
8. ನೀರು ನಿರ್ವಹಣೆ ಹಾಗೂ ಕಾವಲು	7000
9. ಬೋದು ಏರಿಸುವುದು	2000
10.ಪೀಡೆ ನಿರ್ವಹಣೆ	3000
11. ಕಟಾವು ಮತ್ತು ಲಗಾಣಿ	3000
ಒಟ್ಟು ಖರ್ಚು	**77,500**

ಆದಾಯ	**ಖರ್ಚು**	**ನಿವ್ವಳ ಲಾಭ (18 ತಿಂಗಳಿಗೆ)**	**ವರ್ಷಕ್ಕೆ**
2,50,000	77,500	1,72,500	1,15,000

ಕಬ್ಬಿನ ಬೆಳೆಗೆ ಗೊಬ್ಬರಗಳ ಬಳಕೆಯ ಕೋಷ್ಟಕ

1) ಹನಿ ನೀರಾವರಿಯಲ್ಲಿ (ಪ್ರತಿ ಎಕರೆಗೆ) : ತಳಗೊಬ್ಬರ (ನಾಟಿ ಸಮಯದಿಂದ : 100 ಕಿ.ಗ್ರಾಂ 10:26:26 ಅಥವಾ 19:19:19 30 ದಿನಗಳವರೆಗೆ) ಅಥವಾ 12:32:16 ಮಣ್ಣಿಗೆ ಸೇರಿಸುವುದು.

ಅಥವಾ 25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಎಮ್.ಓ.ಪಿ. (ಬಿಳಿ ಬಣ್ಣದ್ದು) + 25 ಕಿ.ಗ್ರಾಂ ಫಾಸ್ಪರಿಕ್ ಅಸಿಡ್–500 ಲೀ. ನೀರಿನಲ್ಲಿ ಕರಗಿಸಿ ಡ್ರಿಪ್ ಮುಖಾಂತರ ಕೊಡುವುದು.

ನಾಟಿ ಮಾಡಿದ 45–50 ದಿನಗಳವರೆಗೆ : 10 ಕಿ.ಗ್ರಾಂ ಜಿಂಕ್ ಸಲ್ಫೇಟ್ (ಶೇ. 33 ರ ಪುಡಿ)

ನಾಟಿ ಮಾಡಿದ 60 ದಿವಸಕ್ಕೆ : 25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 70 ದಿವಸಕ್ಕೆ :10 ಕಿ.ಗ್ರಾಂ ಫೆರಸ್ ಸಲ್ಫೇಟ್

ನಾಟಿ ಮಾಡಿದ 90 ದಿವಸಕ್ಕೆ :25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 100 ದಿವಸಕ್ಕೆ :25 ಕಿ.ಗ್ರಾಂ ಮ್ಯಾಗ್ನೆಸಿಯಂ ಸಲ್ಫೇಟ್

ನಾಟಿ ಮಾಡಿದ 120 ದಿವಸಕ್ಕೆ :50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 150 ದಿವಸಕ್ಕೆ :50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 180 ದಿವಸಕ್ಕೆ : 50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 210 ದಿವಸಕ್ಕೆ :50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 240 ದಿವಸಕ್ಕೆ : 25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 270 ದಿವಸಕ್ಕೆ :25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

ನಾಟಿ ಮಾಡಿದ 300 ದಿವಸಕ್ಕೆ : 25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಬಿಳಿ ಬಣ್ಣದ ಎಮ್.ಓ.ಪಿ.

2) ಬೋದು ಸಾಲು ಹರಿ ನೀರಾವರಿ ಪದ್ಧತಿಯಲ್ಲಿ ಪ್ರತಿ ಎಕರೆಗೆ ಗೊಬ್ಬರದ ಬಳಕೆಯ ಕೋಷ್ಟಕ

ತಳಗೊಬ್ಬರ (ನಾಟಿ ಸಮಯದಿಂದ : 100 ಕಿ.ಗ್ರಾಂ 10:26:26 ಅಥವಾ 19:19:19 30 ದಿನಗಳವರೆಗೆ) ಅಥವಾ 12:32:16 ಕಾಂಪ್ಲೆಕ್ಸ್ ಗೊಬ್ಬರ + 500 ಕಿ.ಗ್ರಾಂ ಸೋಸಿದ ತಿಪ್ಪೆ ಗೊಬ್ಬರ / ಸಂಪದ್ಭರಿತ ಸಾವಯವ ಗೊಬ್ಬರ.

ನಾಟಿ ಮಾಡಿದ 45–50 ದಿನಗಳವರೆಗೆ : 10 ಕಿ.ಗ್ರಾಂ ಜಿಂಕ್ ಸಲ್ಫೇಟ್

ನಾಟಿ ಮಾಡಿದ 60 ದಿವಸಕ್ಕೆ :25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಪೊಟ್ಯಾಷ್ (ಎಮ್.ಓ.ಪಿ.)

ನಾಟಿ ಮಾಡಿದ 70 ದಿವಸಕ್ಕೆ : 10 ಕಿ.ಗ್ರಾಂ ಫೆರಸ್ ಸಲ್ಫೇಟ್

ನಾಟಿ ಮಾಡಿದ 90 ದಿವಸಕ್ಕೆ :25 ಕಿ.ಗ್ರಾಂ ಯೂರಿಯಾ + 25 ಕಿ.ಗ್ರಾಂ ಪೋಟ್ಯಾಷ್ (ಎಮ್.ಓ.ಪಿ.) + 200 ಕಿ.ಗ್ರಾಂ ಸಾವಯವ ಗೊಬ್ಬರ

ನಾಟಿ ಮಾಡಿದ 100 ದಿವಸಕ್ಕೆ :100 ರಿಂದ 150 ಕಿ.ಗ್ರಾಂ ಜಿಪ್ಸಮ್ (ಬೋದು ಏರಿಸುವ ಸಮಯದಲ್ಲಿ)

ನಾಟಿ ಮಾಡಿದ 120 ದಿವಸಕ್ಕೆ :50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಎಮ್.ಓ.ಪಿ. + 300 ಕಿ.ಗ್ರಾಂ ಸಂಪದ್ಭರಿದ ಸಾವಯವ ಗೊಬ್ಬರ

ನಾಟಿ ಮಾಡಿದ 150 ದಿವಸಕ್ಕೆ : 50 ಕಿ.ಗ್ರಾಂ ಯೂರಿಯಾ+50 ಕಿ.ಗ್ರಾಂ ಎಮ್.ಓ.ಪಿ. + 300 ಕಿ.ಗ್ರಾಂ ಸಂಪದ್ಭರಿದ ಸಾವಯವ ಗೊಬ್ಬರ

ನಾಟಿ ಮಾಡಿದ 180 ದಿವಸಕ್ಕೆ:50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಎಮ್.ಓ.ಪಿ. + 300 ಕಿ.ಗ್ರಾಂ ಸಂಪದ್ಭರಿದ ಸಾವಯವ ಗೊಬ್ಬರ

ನಾಟಿ ಮಾಡಿದ 210 ದಿವಸಕ್ಕೆ : 50 ಕಿ.ಗ್ರಾಂ ಯೂರಿಯಾ + 50 ಕಿ.ಗ್ರಾಂ ಎಮ್.ಓ.ಪಿ. + 300 ಕಿ.ಗ್ರಾಂ ಸಂಪದ್ಭರಿದ ಸಾವಯವ ಗೊಬ್ಬರ.

ಕೃಷಿ ವಿಜ್ಞಾನಿಗಳ ಸಲಹೆ, ನೂತನ ತಾಂತ್ರಿಕತೆಗಳ ಅಳವಡಿಕೆ ಹಾಗೂ ಮುಂಜಾಗ್ರತಾ ಕ್ರಮಗಳಿಂದ ಎಕರೆಗೆ 100 ಟನ್ ಗಿಂತಲೂ ಹೆಚ್ಚು ಕಬ್ಬು ಬೆಳೆಯಲು ಸಾಧ್ಯ.

*****

ತಾಂತ್ರಿಕ ಮಾಹಿತಿಗಾಗಿ

– ಸಂಪರ್ಕ : ಕೃಷಿ ಸಂಶೋಧನಾ ಕೇಂದ್ರ, ಸಂಕೇಶ್ವರ, ತಾ: ಹುಕ್ಕೇರಿ, ಜಿ: ಬೆಳಗಾವಿ

ಡಾ. ಎಸ್. ಬಿ. ಪಾಟೀಲ, ತಳಿ ವಿಜ್ಞಾನಿ : ಮೋ: 9449775400, ಡಾ. ಎಸ್. ಎಸ್. ನೂಲಿ, ಬೇಸಾಯ ತಜ್ಞರು ಮೋ: 9448752119,
ಡಾ. ಪೂರ್ಣಿಮಾ ಮಟ್ಟಿ, ಕೀಟ ತಜ್ಞರು : ಮೋ: 9480410923